ಶ್ರೀ. ವಿ.ಆರ್. ಮನ್ನಂಗಿ ರವರ ಶ್ರೀ ದಾನೇಶ್ವರಿ ರೋಡ್‌ಲೈನ್ಸ್ ರವರಿಗೆ ತುಂಗಭದ್ರ ನದಿ ತೀರದ ಹಿರೇಬನ್ನಿಮಟ್ಟಿ ಮರಳು ಗಣಿಗಾರಿಕೆ ವಲಯ ಬಿ.ಎಲ್.ವೈ-ಓ.ಎಸ್.ಬಿ-03 (BLY-OSB-03) ಸರ್ವೆ ನಂ.296 ಹಿರೇಬನ್ನಿಮಟ್ಟಿ ಗ್ರಾಮ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆಯಲ್ಲಿ 27.18 ಎಕರೆ ಪ್ರದೇಶದಲ್ಲಿ ಪ್ರತಿ ವರ್ಷಕ್ಕೆ 98860 ಟನ್ ಸಾಮರ್ಥ್ಯದ ಮರಳು ಗಣಿಗಾರಿಕೆ ನಡೆಸುವ ಸಲುವಾಗಿ ದಿನಾಂಕ 06-01-2021 ರಂದು ಪೂರ್ವಾಹ್ನ 11:00ಗಂಟೆಗೆ (ಯೋಜನಾ ಪ್ರದೇಶದಲ್ಲಿ) ನಡೆದ ಪರಿಸರ ಸಾರ್ವಜನಿಕ ಸಭೆಯ ನಡುವಳಿಗಳು:-

| | | |
|---|---|---|
| ಪರಿಸರ ಕುರಿತಾದ ಸಾರ್ವಜನಿಕ ಆಲಿಕೆ ಸಭೆಯ ಸ್ಥಳ | | ಶ್ರೀ. ವಿ.ಆರ್. ಮನ್ನಂಗಿ ರವರ ಶ್ರೀ ಧಾನೇಶ್ವರಿ ರೋಡ್ ಲೈನ್ಸ್ ರವರಿಗೆ ಹಿರೇಬನ್ನಿಮಟ್ಟಿ ಮರಳು ಗಣಿಗಾರಿಕೆ ವಲಯ ಬಿ.ಎಲ್.ವೈ-ಓ.ಎಸ್.ಬಿ-03 (BLY-OSB-03) ಸರ್ವೆ ನಂ.296 ಹಿರೇಬನ್ನಿಮಟ್ಟಿ ಗ್ರಾಮ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ. |
| ಹಾಜರಿದ್ದ ಪರಿಸರ ಸಾರ್ವಜನಿಕ ವಿಚಾರಣಾ ಸಮಿತಿಯ ಸದಸ್ಯರುಗಳ ವಿವರ | | **ಪದನಾಮ** |
| 1 | ಶ್ರೀ ಚಂದ್ರಶೇಖರ ಗುಡಿ, ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ ಜಿಲ್ಲೆ, ಬಳ್ಳಾರಿ. | **ಅಧ್ಯಕ್ಷರು** |
| 2 | ಶ್ರೀ ಕೆ.ರಾಜು, ಹಿರಿಯ ಪರಿಸರ ಅಧಿಕಾರಿಗಳು, ಕ.ರಾ.ಮಾ.ನಿ.ಮಂ. ವಲಯ ಕಛೇರಿ, ಬಳ್ಳಾರಿ. | **ಸದಸ್ಯರು** |
| 3. | ಶ್ರೀ ಉಮಾಶಂಕರ್ ಪಿ. ಕೆ, ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ. ಬಳ್ಳಾರಿ. | **ಸದಸ್ಯ ಸಮಾವೇಷಕರು** |
| **ಹಾಜರಿದ್ದ ಇತರ ಅಧಿಕಾರಿಗಳ ವಿವರ** | | |
| 1 | ಶ್ರೀ ಹನುಮಂತಪ್ಪ ಹೆಚ್, ಸಹಾಯಕ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ. ಪ್ರಾಕ, ಬಳ್ಳಾರಿ | |
| **ಹಾಜರಿದ್ದ ಇತರ ಅಧಿಕಾರಿಗಳ ವಿವರ** | | |
| 1 | ಶ್ರೀ ಪ್ರಸನ್ನ ಕುಮಾರ್ ಉಪವಿಭಾಗಧಿಕಾರಿಗಳು, ಹರಪ್ಪನಹಳ್ಳಿ, ಬಳ್ಳಾರಿ ಜಿಲ್ಲೆ | |
| 2 | ಶ್ರೀ ಸೋಮಶೇಖರ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ ಹೂವಿನ ಹಡಗಲಿ, ತಾಲ್ಲೂಕು, ಬಳ್ಳಾರಿ ಜಿಲ್ಲೆ | |
| 3 | ಶ್ರೀ ಕುಮಾರಿ ಜ್ಯೋತಿ ದೊಡ್ಡಮನಿ, ಗ್ರಾಮ ಪಂಚಾಯತಿ ಅಭಿವೃದ್ದಿ ಅಧಿಕಾರಿಗಳು, ಗ್ರಾಮ ಪಂಚಾಯತಿ ಕಾರ್ಯಾಲಯ ಮಕರಬ್ಬಿ, ಹೂವಿನ ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ. | |
| 4 | ಶ್ರೀ ಕೆ. ದ್ಯಾಮಪ್ಪ, ಕಂದಾಯ ನೀರಿಕ್ಷಕರು, ಹೀರೆ ಹಡಗಲಿ ಹೋಬಳಿ, ಬಳ್ಳಾರಿ ಜಿಲ್ಲೆ. | |
| 5 | ಶ್ರೀ ಕೆ. ಆನಂದ, ಗ್ರಾಮ ಲೆಕ್ಕಾಧಿಕಾರಿಗಳು, ಹೀರೆ ಬನ್ನಿಮಟ್ಟಿ ಗ್ರಾಮ, ಬಳ್ಳಾರಿ ಜಿಲ್ಲೆ. | |
| 6 | ಶ್ರೀ ಪ್ರಶಾಂತ ಹೂಲಿಕಟ್ಟಿ, ಗ್ರಾಮ ಲೆಕ್ಕಾಧಿಕಾರಿಗಳು, ಹೀರೆ ಹಡಗಲಿ, ಬಳ್ಳಾರಿ ಜಿಲ್ಲೆ. | |
| 7 | ಶ್ರೀ ಕರಿಶ್, ಗ್ರಾಮ ಲೆಕ್ಕಾಧಿಕಾರಿಗಳು, ಯರಡಾ ಗ್ರಾಮ, ಬಳ್ಳಾರಿ ಜಿಲ್ಲೆ. | |

| ಶ್ರೀ. ವಿ.ಆರ್. ಮನ್ನಂಗಿ ರವರ ಶ್ರೀ ದಾನೇಶ್ವರಿ ರೋಡ್‌ಲೈನ್ಸ್, ಉದ್ದಿಮೆಯ ವತಿಯಿಂದ **ಹಾಜರಿದ್ದ** ಪ್ರತಿನಿಧಿಗಳು . | |
|---|---|
| 1. | ಶ್ರೀ. ಇಕ್ಬಾಲ್ ಬೇಗ್, ಮರಳು ಗುತ್ತಿಗೆದಾರರು |
| 2. | ಶ್ರೀ ರಾಮಕೃಷ್ಣ, ಮರಳು ಗುತ್ತಿಗೆದಾರರು |
| 3. | ಶ್ರೀ ವಿ.ಆರ್. ಮನ್ನಂಗಿ, ಮರಳು ಗುತ್ತಿಗೆದಾರರು |
| 4. | ಶ್ರೀ ಜಿ.ಬನೇರ್ ಬೇಗ್, ವ್ಯವಹಾರದಾರರು |
| 5 | ಶ್ರೀ ಶಿವು ಮಲ್ಲಪ್ಪ, ವ್ಯವಹಾರದಾರರು |
| 6 | ಶ್ರೀ ಲಿಂಗರಾಜು, ಮರಳು ಪಾಲುದಾರರು ಮತ್ತು ವ್ಯವಹಾರದಾರರು |

1. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಅಧಿಕಾರಿಗಳ ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ–1** ರಲ್ಲಿ ಲಗತ್ತಿಸಲಾಗಿದೆ.
2. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಸಾರ್ವಜನಿಕರ ವಿಳಾಸ ಮತ್ತು ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ–2** ರಲ್ಲಿ ಲಗತ್ತಿಸಲಾಗಿದೆ.

**ಪೀಠಿಕೆ**

ಶ್ರೀ. ವಿ.ಆರ್. ಮನ್ನಂಗಿ ರವರ ಶ್ರೀ ಧಾನೇಶ್ವರಿ ರೋಡ್ ಲೈನ್ಸ್ ರವರಿಗೆ ತುಂಗಭದ್ರ ನದಿ ತೀರದ ಹಿರೇಬನ್ನಿಮಟ್ಟಿ ಮರಳು ಗಣಿಗಾರಿಕೆ ವಲಯ ಬಿ.ಎಲ್.ವೈ–ಓ.ಎಸ್.ಬಿ–03 (BLY-OSB-03) ಸರ್ವೆ ನಂ.296 ಹಿರೇಬನ್ನಿಮಟ್ಟಿ ಗ್ರಾಮ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆಯಲ್ಲಿ 27.18 ಎಕರೆ ಪ್ರದೇಶದಲ್ಲಿ ಪ್ರತಿ ವರ್ಷಕ್ಕೆ 98860 ಟನ್ ಸಾಮರ್ಥ್ಯದ ಮರಳು ಗಣಿಗಾರಿಕೆ ನಡೆಸಲುಉದ್ದೇಶಿಸಿರುತ್ತಾರೆ.

ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಇವರು ಪರಿಸರ (ಸಂರಕ್ಷಣೆ) ಕಾಯ್ದೆ 1986 ಅಡಿಯಲ್ಲಿ ದಿನಾಂಕ14.09.2006 ರಲ್ಲಿ ಜಾರಿಗೊಳಿಸಿರುವ ಪರಿಸರ ಅಘಾತ ಅಧ್ಯಯನದ ಅಧಿಸೂಚನೆ (ತಿದ್ದುಪಡಿ ದಿನಾಂಕ01.12.2009) ರನ್ವಯ ಯೋಜನಾ ಪ್ರವರ್ತಕರು ಸದರಿ ಯೋಜನೆಗೆ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.

ಆ ಮೇರೆಗೆ ಯೋಜನಾ ಪ್ರವರ್ತಕರು ಪರಿಸರ ವಿಮೋಚನಾ ಪತ್ರವನ್ನು ಪಡೆಯಲು ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರಕ್ಕೆ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿಯವರು ಸಲ್ಲಿಸಿರುವ ಅರ್ಜಿಯನ್ನು ರಾಜ್ಯ ಮಟ್ಟದ ಪರಿಸರ ಆಘಾತ ನಿರ್ಧರಣಾ ಪ್ರಾಧಿಕಾರದ ಅಡಿಯಲ್ಲಿ ಬರುವ ರಾಜ್ಯ ಮಟ್ಟದ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಇವರು ಸದರಿ ಯೋಜನೆಯ Terms of Reference (TOR) ಅಂತಿಮಗೊಳಿಸಿ ಪ್ರಸ್ತಾವನೆಯನ್ನು ಪರಿಗಣಿಸಿ ಖಇಖಂ 88 ಒಖಓ 2017 ದಿನಾಂಕ : 23–03–2018 ರ ಮೂಲಕ ಟರ್ಮ್ಸ್ ಆಫ್ ರೆಫೆರೆನ್ಸ್ ನೀಡಿತ್ತು ಈ ಷರತ್ತುಬದ್ಧ ನಿಬಂಧನೆಗಳ ಅನ್ವಯ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸುವುದು ಕಡ್ಡಾಯವಾಗಿರುತ್ತದೆ.

ಯೋಜನಾ ಪ್ರವರ್ತಕರು ಷರತ್ತುಬದ್ಧ ನಿಬಂಧನೆಗಳನ್ನು ಪಾಲಿಸುವ ಸಲುವಾಗಿ ಮೆ.ಹೊರಿಜನ್ ವೆಂಚರ್ಸ್ ಬೆಂಗಳೂರು ಇವರು ತಯಾರಿಸಿದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನ ವರದಿ ಮತ್ತು ಕಾರ್ಯಕಾರಿ ಸಾರಾಂಶವನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಸಿದ್ಧಪಡಿಸಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಿಕೊಡಲು ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಇವರಿಗೆ ದಿನಾಂಕ 04-10-2018 ರಂದು ಮನವಿ ಸಲ್ಲಿಸಿರುತ್ತಾರೆ.

ಯೋಜನಾ ಪ್ರವರ್ತಕರ ಸದರಿ ಮನವಿಯ ಮೇರೆಗೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವತಿಯಿಂದ ಜಿಲ್ಲಾಧಿಕಾರಿಗಳು, ಬಳ್ಳಾರಿಇವರಿಗೆ ಪರಿಸರ ಸಾರ್ವಜನಿಕ ಆಲಿಕಾ ಸಭೆ ನಡೆಸಲು ಸೂಕ್ತ ದಿನಾಂಕ ಹಾಗೂ ಸಮಯವನ್ನು ನೀಡಲು ಕೋರಲಾಗಿತ್ತು ಅದರನ್ವಯ ಪರಿಸರ ಆಲಿಕೆ ಸಭೆಯನ್ನು ದಿನಾಂಕ: 23-02-2019 ರಂದು ನಿಗಧಿಪಡಿಸಲಾಯಿತು. ಆದರೆ ಕಾರಣಾಂತರಗಳಿಂದ ಪರಿಸರ ಆಲಿಕೆ ಸಭೆಯನ್ನು ಮುಂದೂಡಲಾಗಿತ್ತು.

ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ರವರ ಟಿಪ್ಪಣೆ ದಿನಾಂಕ: 04-01-2020 ರನ್ವಯ ಯೋಜನಾದಾರರರಿಗೆ ದಿನಾಂಕ: 06-01-2020 ರಂದು ಪತ್ರ ಬರೆದು ಸದರಿ ಸರ್ಕಾರಿ ರೆವಿನ್ಯೂ ( ಕಂದಾಯ) ಭೂಮಿಯ ಬಗ್ಗೆ ದಾಖಲಾತಿಗಳನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು. ಅದರನ್ವಯ ಯೋಜನಾದಾರರು ದಾಖಲಾತಿಗಳನ್ನು ಸಲ್ಲಿಸಿದ ನಂತರ ದಾಖಲಾತಿಗಳನ್ನು ಜಿಲ್ಲಾಧಿಕಾರಿಗಳು ಪರಿಶೀಲಿಸಿ ಸದರಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವ ಕುರಿತು ಅಧಿಕೃತ ಜ್ಞಾಪನ ಪತ್ರ ದಿನಾಂಕ: 13-11-2020 ರ ಅನ್ವಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬಳ್ಳಾರಿ ಇವರಿಗೆ ಅಧಿಕಾರ ನೀಡಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಲು ಕ್ರಮವಹಿಸಲು ತಿಳಿಸಿರುತ್ತಾರೆ. (ಪ್ರತಿಯನ್ನು **ಅನುಭಂದ -03** ರಂತೆ ಲಗತ್ತಿಸಿದೆ). ಅದರನ್ವಯ ಅಪರ ಜಿಲ್ಲಾಧಿಕಾರಿಗಳು ದಿನಾಂಕ : 06-01-2021 ರಂದು ಬೆಳಿಗ್ಗೆ 11:00 ಗಂಟೆಗೆ ಯೋಜನಾ ಸ್ಥಳದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸಮ್ಮತಿ ಸೂಚಿಸಿರುತ್ತಾರೆ. ಈ ಸಭೆಗೆ ಪೂರಕವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ ವಿಜಯ ಕರ್ನಾಟಕ (ಕನ್ನಡ)ಹಾಗೂ ಡೆಕ್ಕನ್ ಹೆರಾಲ್ಡ್ (ಆಂಗ್ಲ) ಗಳಲ್ಲಿ ದಿನಾಂಕ 05-12-2020ರಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಹಾಗೂ ಬಳ್ಳಾರಿ ಜಿಲ್ಲೆಯ ಸ್ಥಳೀಯ ದಿನಪತ್ರಿಕೆಯಾದ "ಈ ನಮ್ಮ ಕನ್ನಡ ನಾಡು ಸ್ವತಂತ್ರ ಹೋರಾಟ" ಪತ್ರಿಕೆಯಲ್ಲಿ ಸಹ ದಿನಾಂಕ: 07-12-2020 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯನ್ನು ನೀಡಲಾಗಿರುತ್ತದೆ.ಈ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರ ಅನಿಸಿಕೆ/ಆಕ್ಷೇಪಣೆ/ಸೂಚನೆ/ಸಲಹೆ/ಅಭಿಪ್ರಾಯಗಳನ್ನು ಲಿಖಿತವಾಗಿ 30 ದಿನಗಳ ಒಳಗೆ ಸಲ್ಲಿಸಲು ಕೋರಲಾಗಿರುತ್ತದೆ.

ಸದರಿ ಯೋಜನೆಗೆ ಸಂಬಂಧಿಸಿದಂತೆ ಯೋಜನಾ ಪ್ರವರ್ತಕರು ಸಲ್ಲಿಸಿದ್ದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನದ ವರದಿ ಮತ್ತು ಕಾರ್ಯಕಾರಿ ಸಾರಂಶದ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸಾರ್ವಜನಿಕರ ಪರಾಮರ್ಶೆಗೆ ಇಡಲಾಗಿತ್ತು.

- ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ,
- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಪಂಚಾಯತ್, ಬಳ್ಳಾರಿ,
- ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ.

- ಪುರಸಭೆ ಹೂವಿನ ಹಡಗಲಿ.
- ಗ್ರಾಮ ಪಂಚಾಯತಿ, ಕಾರ್ಯಾಲಯ ಹೀರೆ ಬನ್ನಿಮಟ್ಟಿ ಗ್ರಾಮ, ಬಳ್ಳಾರಿ ಜಿಲ್ಲೆ
- ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ.
- ಗ್ರಾಮ ಪಂಚಾಯತಿ ಕಾರ್ಯಾಲಯ, ಮಕರಬ್ಬಿ, ಬಳ್ಳಾರಿ ಜಿಲ್ಲೆ.
- ವಿಭಾಗಿಯ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ.
- ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
- ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು

ಯೋಜನಾ ಪ್ರದೇಶದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ದೇಶಿತ ಗಣಿಗಾರಿಕೆಯ ಸ್ಥಾಪನೆ ಕುರಿತು ಹಾಗು ಸಾರ್ವಜನಿಕ ಆಲಿಕಾ ಸಭೆ ನಡೆಯುವ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಪಂಚಾಯತಿ ಕಾರ್ಯಾಲಯ ( ಹೀರೆ ಬನ್ನಿಮಟ್ಟಿ ) ಹಾಗೂ ಸುತ್ತಮುತ್ತಲಿನ ಹಳ್ಳಿಗಳಾದ ( ಕಂತೆ ಬೆನ್ನೂರು, ಚಿಕ್ಕ ಬನ್ನಿಮಟ್ಟಿ, ಹವಂಶಿ, ಶಾಕಾರ, ಹೊಳಲು, ಬ್ಯಾಲ ಹುಣಸಿ, ಮಕರಬ್ಬಿ )ಗಳಲ್ಲಿ ಕರ ಪತ್ರಗಳನ್ನುಹಂಚಲಾಗಿದ್ದು ಮತ್ತು ಧ್ವನಿವರ್ದಕಗಳ ಮೂಲಕವು ಸಹ ಪ್ರಚಾರವನ್ನು ದಿನಾಂಕ 02-01-2021 ರಂದು ಮಾಡಲಾಗಿರುತ್ತದೆ.(ಛಾಯ ಚಿತ್ರಗಳನ್ನು **ಅನುಭಂದ 7** ರಂತೆ ಲಗತ್ತಿಸಿದೆ.)

ಜಿಲ್ಲಾಧಿಕಾರಿಗಳು ಬಳ್ಳಾರಿ ರವರ ಅಧಿಕೃತ ಜ್ಞಾಪನ ಪತ್ರ ದಿನಾಂಕ: 05-01-2021 ರ ಅನ್ವಯ ಶ್ರೀ ಚಂದ್ರಶೇಖರ ಗುಡಿ, ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ ಜಿಲ್ಲೆ, ಬಳ್ಳಾರಿ ಇವರಿಗೆ ಅಧಿಕಾರ ನೀಡಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಲು ಕ್ರಮವಹಿಸಲು ತಿಳಿಸಿರುತ್ತಾರೆ. (ಪ್ರತಿಯನ್ನು **ಅನುಭಂದ -04** ರಂತೆ ಲಗತ್ತಿಸಿದೆ.)

ಮೇಲೆ ತಿಳಿಸಿದ ಅಧಿಸೂಚನೆಯಲ್ಲಿನ ಎಲ್ಲಾ ವಿಧಿ-ವಿಧಾನಗಳನ್ನು ಕ್ರಮಬದ್ಧವಾಗಿ ನಿಯಮಾನುಸಾರ ಪಾಲಿಸಿ ದಿನಾಂಕ 06-01-2021 ರಂದು ಪೂರ್ವಾಹ್ನ 11.00 ಗಂಟೆಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರ ಅಧ್ಯಕ್ಷತೆಯಲ್ಲಿ ಯೋಜನಾ ಸ್ಥಳದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ಪ್ರಾರಂಭಿಸಲಾಯಿತು.

**ಸಭೆಯ ನಡವಳಿಗಳು**

ಸದಸ್ಯ ಸಮಾವೇಷಕರು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ, ಬಳ್ಳಾರಿ ಪ್ರಾದೇಶಿಕ ಕಛೇರಿಯ ಪರಿಸರ ಅಧಿಕಾರಿಗಳಾದ ಶ್ರೀ ಉಮಾಶಂಕರ್ ಪಿ.ಕೆ. ಅವರು ಶ್ರೀ ಚಂದ್ರಶೇಖರ ಗುಡಿ, ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ ಜಿಲ್ಲೆ, ಮತ್ತು ಹಿರಿಯ ಪರಿಸರ ಅಧಿಕಾರಿ ಶ್ರೀ ಕೆ.ರಾಜು ಅವರಿಗೆ ಮತ್ತು ಶ್ರೀ ಪ್ರಸನ್ನ ಕುಮಾರ್ ಉಪವಿಭಾಗಧಿಕಾರಿಗಳು, ಹರಪ್ಪನಹಳ್ಳಿ, ಶ್ರೀ ಸೋಮಶೇಖರ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ಹರಪ್ಪನಹಳ್ಳಿ

ರವರಿಗೆ, ಸ್ವಾಗತ ಕೋರಿದರು. ಮೆ.ಶ್ರೀ. ವಿ.ಆರ್. ಮನ್ನಂಗಿ ರವರ ಶ್ರೀ ಧಾನೇಶ್ವರಿ ರೋಡ್ ಲೈನ್ಸ್‌ಮಾಲೀಕರು/ಪ್ರತಿನಿಧಿಗಳಿಗೆ, ಎಲ್ಲಾ ಸಾರ್ವಜನಿಕರಿಗೆ, ಪತ್ರಕರ್ತರಿಗೆ ಹಾಗೂ ಇತರೆ ಇಲಾಖೆಯ ಅಧಿಕಾರಿಗಳಿಗೆ ಸ್ವಾಗತ ಕೋರಿದರು ಹಾಗೂ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಕೇಂದ್ರ ಸರ್ಕಾರ, ಇವರು ಪರಿಸರ(ಸಂರಕ್ಷಣೆ)ಕಾಯ್ದೆ, 1986 ರಡಿಯಲ್ಲಿ ದಿನಾಂಕ14-09-2006 ರಲ್ಲಿ ಜಾರಿಗೊಳಿಸಿರುವ ಪರಿಸರ ಅಘಾತ ಅಧ್ಯಯನದ ಅಧಿಸೂಚನೆ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆ ನೀಡಿದರು. ಸದರಿ ಯೋಜನೆಗೆ ಸಂಬಂಧಪಟ್ಟ ಪ್ರಾಧೀಕಾರದಿಂದ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುವ ವಿಷಯವನ್ನು ಸಹ ಸಭೆಗೆ ತಿಳಿಸಿದರು. ಸಾರ್ವಜನಿಕ ಪರಿಸರ ಆಲಿಕೆ ಸಭೆಯ ಪೂರ್ವದಲ್ಲಿ ನಿಯಮಾನುಸಾರ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆಯನ್ನು ನೀಡಿದರು ಹಾಗೂ ಸಾರ್ವಜನಿಕ ಆಲಿಕೆಯ ಸಭೆಯ ಅಧ್ಯಕ್ಷತೆಯನ್ನು ವಹಿಸುವಂತೆ ಮತ್ತು ಸಭೆಯನ್ನು ನಡೆಸಿಕೊಡುವಂತೆ ಶ್ರೀ ಚಂದ್ರಶೇಖರ ಗುಡಿ, ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ ರವರಿಗೆ ಕೋರಿದರು.

ಶ್ರೀ ಚಂದ್ರಶೇಖರ ಗುಡಿ, ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ ಜಿಲ್ಲೆ, ಬಳ್ಳಾರಿ ರವರು ಸಭೆಯನ್ನು ಉದ್ದೇಶಿಸಿ ಯೋಜನೆಗೆ ಪರಿಸರ ಸಾರ್ವಜನಿಕ ವಿಚಾರಣೆಯನ್ನು ನಡೆಸುವುದು ಕಡ್ಡಾಯವಾಗಿದೆ ಎಂದು ತಿಳಿಸಿದರು. ಪರಿಸರ ಅಘಾತ ಅಧ್ಯಯನ ಅಧಿಸೂಚನೆ ದಿನಾಂಕ: 14-09-2006 ರ ಬಗ್ಗೆ ವಿವರವಾದ ಮಾಹಿತಿಯನ್ನು ಸಭೆಯಲ್ಲಿದ್ದ ಸಾರ್ವಜನಿಕರಿಗೆ ತಿಳಿಸಿದರು ಹಾಗೂ ಪರಿಸರ ಸಾರ್ವಜನಿಕ ವಿಚಾರಣೆಯ ಅಗತ್ಯತೆಯನ್ನು ಸಂಕ್ಷಿಪ್ತವಾಗಿ ವಿವರಿಸಿದರು.

ಪ್ರಸ್ತಾವಿತ ಯೋಜನೆಯ ಪವರ್ ಪಾಯಿಂಟ್ ಪ್ರಸ್ತುತಿಯನ್ನು ನೀಡುವಂತೆ ಅವರು ಯೋಜನಾ ಪ್ರತಿಪಾದಕರಿಗೆ ಮಾಹಿತಿ ನೀಡಿದರು, ಅಲ್ಲಿ ವಿಚಾರಣೆಗೆ ಹಾಜರಿದ್ದ ಸಾರ್ವಜನಿಕರು ಪರಿಸರ ಸಮಸ್ಯೆಗಳ ಕುರಿತು ಉದ್ದೇಶಿತ ಯೋಜನೆಗೆ ತಮ್ಮ ಎಲ್ಲಾ ಅಭಿಪ್ರಾಯ/ಸಲಹೆ/ಪತ್ರಗಳನ್ನು ಯೋಜನೆಯ ಬಗ್ಗೆ ಲಿಖಿತ ಅಥವಾ ಮೌಖಿಕವಾಗಿ ಪ್ರಸ್ತುತಪಡಿಸುವಂತೆ ವಿನಂತಿಸಿಕೊಂಡರು. ಈ ನಡವಳಿಯು ಲಿಖಿತ ದಾಖಲೆ ಮತ್ತು ವಿಡಿಯೋಗ್ರಾಫಿ ಎರಡನ್ನು ಒಳಗೊಂಡಿದೆ ಎಂದು ಸಭೆಗೆ ತಿಳಿಸಿದರು.

ಅದರಂತೆ, ಮೆ. ಶ್ರೀ. ವಿ.ಆರ್. ಮನ್ನಂಗಿ ರವರ ಶ್ರೀ ಧಾನೇಶ್ವರಿ ರೋಡ್ ಲೈನ್ಸ್ ಪರವಾಗಿ ಶ್ರೀ ಸಚಿನ್ ಮೆ. ಹೊರಿಜನ್ ವೆಂಚರ್ಸ್ ಬೆಂಗಳೂರು. ಇವರು ಉದ್ದೇಶಿತ ಯೋಜನೆಗೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನ ವರದಿಯ ಕಾರ್ಯಕಾರಿ ಸಾರಾಂಶಗಳಾದ ಯೋಜನೆ ಪ್ರಸ್ಥಾವನೆ, ಸರ್ಕಾರದ ಮಂಜೂರಾತಿಗಳು, ಸ್ಥಳದ ಫೋಟೊಗಳು, ಪರಿವೀಕ್ಷಣೆಯ ಸ್ಥಳಗಳ ನಕ್ಷೆ, ದೂಳು/ವಾಯು ಗುಣಮಟ್ಟ, ದೂಳಿನ ಗುಣಮಟ್ಟ ಸುಧಾರಿತ ಕ್ರಮಗಳು, ಶಬ್ಧದ ಮಟ್ಟದ ಸುಧಾರಿತ ಕ್ರಮಗಳು, ನೀರಿನ ಗುಣಮಟ್ಟ ಸುಧಾರಿತ ಕ್ರಮಗಳು, ಮಣ್ಣಿನ ಗುಣಮಟ್ಟದ ಸುಧಾರಿತ ಕ್ರಮಗಳು, ಜಮೀನಿನ ಬಳಕೆ, ಸಸ್ಸೀಕರಣ ಫೋಟೊಗಳು, ಗುತ್ತಿಗೆ ಪ್ರದೇಶದೊಳಗಿನ ರಕ್ಷಣಾತ್ಮಕ ಕ್ರಮಗಳ ಫೋಟೊ, ಮರಳು ಗಣಿಗಾರಿಕೆ ಹೊರ ಪ್ರದೇಶದ ರಕ್ಷಣಾತ್ಮಕ ಕ್ರಮಗಳ ಫೋಟೊ, ಪರಿಸರ ರಕ್ಷಣೆಯ ಬಜೆಟ್, ಸಿ.ಎಸ್.ಆರ್. ಚಟುವಟಿಕೆಗಳನ್ನೊಳಗೊಂಡ ವಿವರಗಳನ್ನು ಪವರ್ ಪಾಯಿಂಟ್ ಮೂಲಕ ಸಭೆಗೆ ಮಂಡಿಸಿದರು.

ಸಭೆಯ ಅಧ್ಯಕ್ಷರು ಈ ಉದ್ದೇಶಿತ ಯೋಜನೆಯ ಬಗ್ಗೆ ಪರಿಸರ ಕುರಿತಾಗಿ ಯಾವುದೇಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳು ಯಾವುದಾದರೂ ಇದ್ದಲ್ಲಿ ಸಭೆಗೆ ಮಂಡಿಸುವಂತೆ ಸಭೆಯಲ್ಲಿ ನೆರೆದಿದ್ದ ಸಾರ್ವಜನಿಕರನ್ನು ಕೋರಿದರು.

**ಆ ಮೇರೆಗೆ ಸಾರ್ವಜನಿಕರು ಯೋಜನೆಯ ಬಗ್ಗೆ ತಮ್ಮ ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳನ್ನು ಈ ಕೆಳಕಂಡಂತೆ ಮಂಡಿಸಿದರು.**

1. **ಶ್ರೀ ಗೋಣೆಪ್ಪ ಕುಷ್ಟಗಿ, ಬಿನ್ ಕೊಟ್ರಪ್ಪ, ಹಿರೇಬನ್ನಿಮಟ್ಟಿ ಗ್ರಾಮ, ರವರು** ಮಾತನಾಡುತ್ತಾ, ತಮ್ಮ ಗ್ರಾಮದ ವ್ಯಾಪ್ತಿಯಲ್ಲಿ ಮರಳು ಗಣಿಗಾರಿಕೆ ನಡೆಯುತ್ತಿದ್ದು, ಸದರಿ ಮರಳು ಗಣಿಗಾರಿಕೆಯಿಂದ ಬಂದು ರಾಜಧನದಿಂದ ಗ್ರಾಮದಲ್ಲಿ ಚರಂಡಿ ಸ್ವಚ್ಚಗೊಳಿಸುವುದು, ವಿದ್ಯುತ್ ದೀಪ್ ಅಳವಡಿಕೆ, ಕುಡಿಯುವ ನೀರಿನ ವ್ಯವಸ್ಥೆಯನ್ನು ಪಂಚಾಯತಿ ವತಿಯಿಂದ ಮಾಡಿಕೊಡುವಂತೆ ಕೋರಿದಾಗ ಪಂಚಾಯತಿ ಅಭಿವೃದ್ದಿ ಅಧಿಕಾರಿಗಳು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಹೊಸಪೇಟೆ ಸಂಪರ್ಕಿಸುವಂತೆ ತಿಳಿಸಿರುವುದಾಗಿ ಆದುದರಿಂದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರನ್ನು ಸಂಪರ್ಕಿಸಿದರು ಸಹ ಪ್ರಯೋಜನವಾಗಿರುವುದಿಲ್ಲವೆಂದು ತಿಳಿಸಿ ಮರಳು ಗಣಿಗಾರಿಕೆಯಿಂದ ಬರುವ ರಾಜಧನದಿಂದ ತಮ್ಮ ಗ್ರಾಮ ಪಂಚಾಯತಿ ವತಿಯಿಂದ ತಾವು ಕೋರಿದ ಕೆಲಸಗಳನ್ನು ಕೂಡಲೇ ಮಾಡಿಕೊಡುವಂತೆ ಕೇಳಿದರು.

2. **ಶ್ರೀ ಬಾರ್ಕಿ ಬೆಟ್ಟದ ಮಲ್ಲಪ್ಪ, ಹಿರೇಬನ್ನಿಮಟ್ಟಿ ಗ್ರಾಮ, ಹಾಲಿ ಗ್ರಾಮ ಪಂಚಾಯತಿ ಸದಸ್ಯರು, ಇವರು** ಸದರಿ ಪ್ರದೇಶದಲ್ಲಿ ಮರಳು ಗಣಿಗಾರಿಕೆ ನಡೆಸಲು ಅನುಮತಿ ನೀಡಬಾರದೆಂದು ಸ್ಥಳದಲ್ಲಿಯೇ ಲಿಖಿತ ರೂಪದಲ್ಲಿ ಮನವಿಯನ್ನು ಸಲ್ಲಿಸಿದರು. ಮುಂದುವರೆದು, ಮಾತನಾಡುತ್ತಾ, ಸದರಿ ಸರ್ವೆ ನಂ 296 ಕ್ಕೆ ಹೊಂದಿಕೊಂಡಂತೆ ಫಲವತ್ತಾದ ಕೃಷಿ ಜಮೀನುಗಳಿದ್ದು ಸದರಿ ಪ್ರದೇಶದಲ್ಲಿ ಮರಳು ಗಣಿಗಾರಿಕೆ ನಡೆಸಲು ಅನುಮತಿ ನೀಡಿದಲ್ಲಿ ಈ ಭಾಗದಲ್ಲಿ ಕೃಷಿ ಚಟುವಟಿಕೆ ನಡಿಸುವ ಉದ್ದೇಶದಿಂದ ರೈತರು ಪೈಪ ಲೈನ್‌ಗಳು ಮತ್ತು ವಿದ್ಯುತ್ ವೈರ್‌ಗಳು ಕೊಚ್ಚಿಕೊಂಡು ಹೋಗುತ್ತವೆ ಎಂದು ತಿಳಿಸಿದರು ಅಲ್ಲದೆ ಪ್ರಸ್ತಾಪಿತ ಮರಳು ಗಣಿಗಾರಿಕೆ ನಡೆಸುವುದರಿಂದ ಉಂಟಾಗುವ ಧೂಳು ಪಕ್ಕದಲ್ಲಿರುವ ರೈತರ ಜಮೀನುಗಳಿಗೆ ಹರಡಿ/ಬಿದ್ದು ಬೆಳೆಗಳಿಗೆ ಹಾನಿಯಾಗುತ್ತದೆ ಎಂದು ತಿಳಿಸಿ ಈ ಪ್ರದೇಶದಲ್ಲಿ ಮರಳು ಗಣಿಗಾರಿಕೆ ನಡೆಸಲು ತಮ್ಮ ವಿರೋದ ಇರುವುದಾಗಿ ತಿಳಿಸಿದರು.

3. **ಶ್ರೀ ಬಸವಣ್ಯಪ್ಪ ಸಾಸಲವಾಡ, ಹಿರೇಬನ್ನಿಮಟ್ಟಿ ಗ್ರಾಮ,ಇವರು** ಮಾತನಾಡುತ್ತಾ, ಸದರಿ ಪ್ರದೇಶದ ಪಕ್ಕದಲ್ಲಿ ಸರ್ವೇ ನಂ. 293 ರಲ್ಲಿ ತಮ್ಮ ಕೃಷಿ ಜಮೀನು ಇದ್ದು 1974 ರಿಂದ ತಾವು ಕೃಷಿ ಚಟುವಟಿಕೆಗಾಗಿ ಪೈಪ್‌ಲೈನ್ ಗಳನ್ನು ಅಳವಡಿಸಿದ್ದು ಈ ಭಾಗದಲ್ಲಿ ಮರಳು ಗಣಿಗಾರಿಕೆ ನಡೆಸಲು ಅನುಮತಿ ನೀಡಿರುವುದರಿಂದ ಕೃಷಿ ಚಟುವಟಿಕೆ ನಡೆಸುವುದು ಕಷ್ಟಕರವಾಗಿದೆ ಎಂದು ತಿಳಿಸಿದರು.

4. **ಶ್ರೀ ಚನ್ನಪ್ಪ ಬಳ್ಳಾರಿ, ಹಾಲಿ ಗ್ರಾಮ ಪಂಚಾಯತಿ ಸದಸ್ಯರು ಹಿರೇಬನ್ನಿಮಟ್ಟಿ ಗ್ರಾಮ,** ಇವರು ಮಾತನಾಡುತ್ತಾ, ಸದರಿ ಯೋಜನೆಯ ಅನುಷ್ಠಾನಕ್ಕೆ ನಿಗದಿಪಡಿಸಿರುವ ಪರಿಹಾರ ಕ್ರಮಗಳು ಕೇವಲ ಓದುವದಕ್ಕೆ ಮಾತ್ರ ಸೀಮಿತವಾಗಿದ್ದು ಕಾರ್ಯಗತವಾಗುವುದಿಲ್ಲ ಎಂದು ತಿಳಿಸಿದರು. ಮುಂದುವರೆದು ಮಾತನಾಡುತ್ತಾ ಸದರಿ ಪ್ರದೇಶದಲ್ಲಿ ಈಗಾಗಲೇ ಮರಳು ಗಣಿಗಾರಿಕೆ ಚಟುವಟಿಕೆಯಿಂದ 10 ರಿಂದ 20 ಅಡಿ ಗುಂಡಿಗಳಾಗಿದ್ದು ರೈತರು ಓಡಾಡಲು ತುಂಬಾ ತೊಂದರೆಯಾಗಿದೆ ಎಂದು ತಿಳಿಸಿದರು. ಈ ಹಿಂದೆ ಇದೆ ಪ್ರದೇಶದ ಗುಂಡಿಯಲ್ಲಿ ಬಿದ್ದು ಒಂದು ಎತ್ತು ಮರಣ ಹೊಂದಿದ್ದು ಎತ್ತನ್ನು ಕಳೆದುಕೊಂಡ ರೈತನಿಗೆ ಮತ್ತೊಂದು ಎತ್ತನ್ನು ಕೋಡಿಸಿ ಕೃಷಿ ಚಟುವಟಿಕೆ ನಡೆಸಲು ಅನುಕೂಲ ಮಾಡಿಕೊಡುವಂತೆ ಮರಳು ಗಣಿಗಾರಿಕೆ ಗುತ್ತಿಗೆ ಪಡೆದ ಮಾಲೀಕರಲ್ಲಿ ಹಲವಾರು ಬಾರಿ ಮನವಿ ಮಾಡಿದ್ದರೂ ಸಹ ಗುತ್ತಿಗೆದಾರರು ಎತ್ತನ್ನು ಕಳೆದುಕೊಂಡ ರೈತನಿಗೆ ಬದಲಿ ಎತ್ತನ್ನು ಕೊಡಿಸಲಿಲ್ಲ. ಆದುದರಿಂದ ಎಲ್ಲಾ ರೈತರು ಸೇರಿ ಸ್ವಲ್ಪ ಪ್ರಮಾಣದ ಹಣವನ್ನು ಹೊಂದಿಸಿ ಎತ್ತನ್ನು ಕೊಡಿಸುವುದಿರುವಾಗಿ ತಿಳಿಸಿದರು. ನಮ್ಮ ಗ್ರಾಮದ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಮರಳನ್ನು ನಮ್ಮ ಗ್ರಾಮದ ಗುಡಿ ಗೋಪುರಗಳನ್ನು ನಿರ್ಮಾಣ ಮಾಡಲು ಕಡಿಮೆ ದರದಲ್ಲಿ ನೀಡುವಂತೆ ಕೋರಿದರು. ಮರಳು ಗಣಿಗಾರಿಕೆ ನಡೆಸಲು ಅನುಮತಿ ನೀಡಿದಾಗ ಗುತ್ತಿಗೆದಾರರಿಂದ ಬರುವ ರಾಜಧನವನ್ನು ನಮ್ಮ ಗ್ರಾಮ ಪಂಚಾಯತಿಗೆ ನೀಡಿ ಗ್ರಾಮದ ಅಭಿವೃದ್ಧಿಗೆ ಸಹಾಯ ಮಾಡುವಂತೆ ಕೋರಿದರು. ಅಲ್ಲದೆ ಮರಳು ಗಣಿಗಾರಿಕೆ ಚಟುವಟಿಕೆಯಿಂದ ಉಂಟಾಗುವ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಹಾಗೂ ಕಾನೂನಿನ ಚೌಕಟ್ಟಿನಲ್ಲಿ ಮರಳು ಗಣಿಗಾರಿಕೆ ನಡೆಸಿ ಎಲ್ಲಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ತಿಳಿಸಿ ಗುತ್ತಿಗೆದಾರರಿಂದ ಲಿಖಿತವಾಗಿ ಬರೆಸಿಕೊಂಡು ತದನಂತರ ಮರಳು ಗಣಿಗಾರಿಕೆ ನಡೆಸಲು ಅನುಮತಿ ನೀಡುವಂತೆ ತಿಳಿಸಿದರು.

5. **ಶ್ರೀ ಲಿಂಗನಗೌಡ ಹಿರೇಬನ್ನಿಮಟ್ಟಿ ಗ್ರಾಮ,** ಇವರು ಮಾತನಾಡುತ್ತಾ, ಸದರಿ ಪ್ರದೇಶದ ಪಕ್ಕದಲ್ಲಿಯೇ ಸರ್ವೇ ನಂ. 204 ರಲ್ಲಿ ತಮ್ಮ ಕೃಷಿ ಜಮೀನು ಇದ್ದು ಅದರಲ್ಲಿಯು ಸಹ ಮರಳು ಗಣಿಗಾರಿಕೆ ನಡೆಸಿರುತ್ತಾರೆ ಅದನ್ನು ಪ್ರಶ್ನಿಸಿದ್ದಕ್ಕೆ ತಮ್ಮ ಮೇಲೆ ದೌರ್ಜನ್ಯ ಎಸೆಗಿರುತ್ತಾರೆ ಎಂದು ತಿಳಿಸಿದರು. ಈ ಪ್ರದೇಶದ ಮರಳು ಗಣಿಗಾರಿಕೆ ನಡೆಸಿರುವುದರಿಂದ ತಮ್ಮ ಕೃಷಿ ಜಮೀನಿಗೆ ಅಳವಡಿಸಿರುವ ಪೈಪ್ ಲೈನ್ ಗಳಿಗೆ ದಕ್ಕೆ ಉಂಟಾಗಿರುವುದಾಗಿ ತಿಳಿಸಿದರು. ಮರಳು ಗಣಿಗಾರಿಕೆಯಿಂದ ರೈತರಿಗೆ ಅನ್ಯಾಯವಾಗುತ್ತಿರುವುದಾಗಿ ತಿಳಿಸಿದರು.

6. **ಶ್ರೀ ಸಾಸಲವಾಡ ಶಿವಪ್ಪ ಹಿರೇಬನ್ನಿಮಟ್ಟಿ ಗ್ರಾಮ,** ಇವರು ಮಾತನಾಡುತ್ತಾ, ಈ ಮೊದಲು ಸದರಿ ಪ್ರದೇಶದ ಅಕ್ಕ ಪಕ್ಕದಲ್ಲಿ ಬ್ಲಾಕ್ ನಂ. 2 ಮತ್ತು 4 ರಲ್ಲಿ ಮರಳು ಗಣಿಗಾರಿಕೆ ನಡೆಸಲು ಸರ್ಕಾರದಿಂದ ಅನುಮತಿ ನೀಡಲಾಗಿತ್ತು. ಸದರಿ ಬ್ಲಾಕ್ ಗಳನ್ನು ಗುತ್ತಿಗೆ ಪಡೆದ ಗುತ್ತಿಗೆದಾರರಿಗೆ ಗ್ರಾಮದ ದೇವಸ್ಥಾನಗಳ ನಿರ್ಮಾಣಕ್ಕಾಗಿ ಮರಳನ್ನು ಕೊಡುವಂತೆ ಮನವಿ ಮಾಡಲಾಗಿತ್ತು ಆದರೆ, ಗುತ್ತಿಗೆದಾರರು ಮರಳನ್ನು ನೀಡಿರುವುದಿಲ್ಲ ಎಂದು ತಿಳಿಸಿದರು. ಅಲ್ಲದೆ ಸದರಿ ಪ್ರದೇಶದಲ್ಲಿ ಮರಳು ಗಣಿಗಾರಿಕೆ ನಡೆಸುವ ಸಮಯದಲ್ಲಿ ರೈತರು ಅಳವಡಿಸಿರುವ ಪೈಪ್‌ಲೈನ್ ಗಳನ್ನು ಹಾಳು ಮಾಡಲಾಗಿದ್ದು ಅವುಗಳನ್ನು ಕೂಡಲೇ ಸರಿಪಡಿಸಿಕೊಡುವಂತೆ ಕೇಳಿದರು. ಮುಂದುವರೆದು, ಕೃಷಿ

ಜಮೀನುಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಅಭಿವೃದ್ಧಿ ಪಡಿಸುವಂತೆ ಕೋರಿ ಸದರಿ ಯೋಜನೆಯನ್ನು ಸ್ವಾಗತಿಸಿದರು.

7. **ಶ್ರೀ ಬಸಪ್ಪ ಗೌಡಣ್ಣನವರ್, ಹಿರೇಬನ್ನಿಮಟ್ಟಿ ಗ್ರಾಮ,** ಇವರು ಮಾತನಾಡುತ್ತಾ, ಸದರಿ ಯೋಜನೆಯ ಅನುಷ್ಠಾನಕ್ಕೆ ಪರಿಸರ ಸಂರಕ್ಷಣೆಗೆ ನಿಗದಿಪಡಿಸಿರುವ ಪರಿಹಾರ ಕ್ರಮಗಳು ಕೇವಲ ಓದುವದಕ್ಕೆ ಮಾತ್ರ ಸೀಮಿತವಾಗಿದ್ದು ಕಾರ್ಯಗತವಾಗುವುದಿಲ್ಲ ಎಂದು ತಿಳಿಸಿದರು. ಮುಂದುವರೆದು, ಹಿರೇಬನ್ನಿಮಟ್ಟಿ ಗ್ರಾಮದಿಂದ ಅಗಸಿ ಗಡಿಯವರೆಗಿನ ರಸ್ತೆಯು ಸಂಪೂರ್ಣ ಹದಗೆಟ್ಟಿದ್ದು ಅದನ್ನು ಸರಿಪಡಿಸುವಂತೆ ಹಲವಾರು ಬಾರಿ ಮನವಿ ಮಾಡಿದ್ದರೂ ಸಹ ಇದುವರೆಗೂ ಸರಿಪಡಿಸಿರುವುದಿಲ್ಲ ಎಂದು ತಿಳಿಸಿದರು. ಸದರಿ ಪ್ರದೇಶವು ಈಗ ಶಾಂತವಾಗಿದ್ದು ಮಿತಿ ಮೀರಿ ಮರಳು ಗಣಿಗಾರಿಕೆ ನಡಿಸುವುದರಿಂದ ಪ್ರಕೃತಿ ವಿಕೋಪ ಉಂಟಾದಾಗ ಈ ಪ್ರದೇಶದ ಸಂಪೂರ್ಣ ಚಿತ್ರಣವೇ ಭೀಕರವಾಗಿರುತ್ತದೆ ಎಂದು ತಿಳಿಸಿದರು. ಪ್ರಕೃತಿಯ ಒಡಲನ್ನು ಬಗೆದು ಮರಳು ಗಣಿಗಾರಿಕೆ ನಡೆಸುವುದಕ್ಕೆ ತಮ್ಮ ವಿರೋದವಿದೆ ಎಂದರು. ಸದರಿ ಯೋಜನೆಯನ್ನು ನಡೆಸಲು ಸಭೆಯಲ್ಲಿರುವವರೆಲ್ಲರು ವಿರೋದ ವ್ಯಕ್ತಪಡಿಸಿದರು ಸಹ ಈ ಪ್ರದೇಶದಲ್ಲಿ ಮರಳು ಗಣಿಗಾರಿಕೆ ನಡೆಸಲು ಸರ್ಕಾರ ಅನುಮತಿ ನೀಡುತ್ತದೆ ಎಂದರೆ ಖಿಷಾದ ವ್ಯಕ್ತಪಡಿಸಿದರು.

8. **ಶ್ರೀ ಜಲಿಗೇರಿ ಹನುಮಂತಪ್ಪ, ಹಿರೇಬನ್ನಿಮಟ್ಟಿ ಗ್ರಾಮ,** ಇವರು ಮಾತನಾಡುತ್ತಾ, ಮರಳು ಗಣಿಗಾರಿಕೆ ನಡೆಸುವಾಗ ವಾಹನಗಳ ಓಡಾಟದಿಂದ ಕೃಷಿ ಜಮೀನಿಗೆ ಅಳವಡಿಸಿರುವ ಪೈಪ್ ಲೈನ್‌ಗಳು ಹಾಳಾಗಿರುವುದಾಗಿ ತಿಳಿಸಿದರು. ಈ ಪ್ರದೇಶದಲ್ಲಿ ಮರಳು ಗಣಿಗಾರಿಕೆ ನಡೆಸಿ ರೈತರಿಗೆ ತೊಂದರೆ ಕೊಡಬೇಡಿ ಎಂದು ಮನವಿ ಮಾಡಿದರು.

9. **ಶ್ರೀ ಆಂಜನೇಯ ನಾಗೇನಹಳ್ಳಿ ಸಮಗ್ರ ಪರಿಸರ ಸಮುದಾಯ ಎನ್.ಜಿ.ಓ, ಹಾವೇರಿ ಜಿಲ್ಲೆ** ಇವರು ಮಾತನಾಡುತ್ತಾ, ಸದರಿ ಪ್ರದೇಶದಲ್ಲಿ ಮರಳು ಗಣಿಗಾರಿಕೆ ನಡೆಸಲು ಎಲ್ಲಾ ರೈತರ ಸಹಮತ ಇರುವುದೆಂದು ಅಭಿಪ್ರಾಯ ಪಟ್ಟಿರುವುದಾಗಿ ತಿಳಿಸಿದ್ದಕ್ಕೆ ಸಭೆಯಲ್ಲಿ ಹಾಜರಿದ್ದ ರೈತರು ತೀವ್ರ ವಿರೋದ ವ್ಯಕ್ತಪಡಿಸಿ ಮರಳು ಗಣಿಗಾರಿಕೆಯಿಂದ ಭಾದಿತ ರೈತರಿಗೆ ಮಾತ್ರ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ನೀಡುವಂತೆ ಹಾಗೂ ಎಲ್ಲಿಂದಲೋ ಬಂದವರಿಗೆ ಅವಕಾಶ ನೀಡಬಾರದೆಂದು ಸಭೆಯ ಅಧ್ಯಕ್ಷರ ಗಮನಕ್ಕೆ ತಂದರು ಆದುದರಿಂದ, ಸಭೆಯಲ್ಲಿ ಹಾಜರಿದ್ದ ರೈತರ ಒತ್ತಾಯದ ಮೇರೆಗೆ ಶ್ರೀ ಆಂಜನೇಯನಾಗೇನಹಳ್ಳಿ ರವರಿಗೆ ಅಭಿಪ್ರಾಯ ವ್ಯಕ್ತಪಡಿಸಲು ಪಡಿಸಲು ನೀರಾಕರಿಸಲಾಯಿತು ಹಾಗೂ ಅವರಿಂದ ಲಿಖಿತ ರೂಪದ ಮನವಿಯನ್ನು ಸ್ವೀಕರಿಸಲಾಯಿತು.

ಕೊನೆಯಲ್ಲಿ ಸಾರ್ವಜನಿಕ ಆಲಿಕೆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಚಂದ್ರಶೇಖರ ಗುಡಿ, ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ ಜಿಲ್ಲೆ, ಬಳ್ಳಾರಿ ಇವರು ತಮ್ಮ ಅಧ್ಯಕ್ಷೀಯ ಮಾತುಗಳನ್ನಾಡುತ್ತ, ಸದರಿ ಸಭೆಯು ಪರಿಸರ ಸಾರ್ವಜನಿಕ ಸಭೆಯಾಗಿದ್ದು, ಇದರಲ್ಲಿ ಎಲ್ಲರಿಗೂ ಮಾತನಾಡಲು ಮುಕ್ತ ಅವಕಾಶವನ್ನು ಕಲ್ಪಿಸಲಾಗಿದೆ. ಹಾಗು ತಾವು ಮಾತನಾಡಿದ ಪರ/ವಿರೋಧ

ಅಭಿಪ್ರಾಯಗಳನ್ನ ದಾಖಲಿಸಲಾಗಿದೆ. ಉದ್ದಿಮೆಯವರು ದಿನಾಂಕ:03-11-2020 ರಂದು ಜಿಲ್ಲಾಧಿಕಾರಿಯವರಿಗೆ ಪತ್ರ ನೀಡಿದ್ದು ಪ್ರತಿ ವರ್ಷ ಸಿ.ಎಸ್.ಆರ್. ಅಡಿಯಲ್ಲಿ ರೂ 6,58,000/- ವಿನಿಯೋಗಿಸುವುದಾಗಿ ತಿಳಿಸಿರುತ್ತಾರೆ. (ಪ್ರತಿಯನ್ನು **ಅನುಬಂಧ-5** ರಲ್ಲಿ ಲಗತ್ತಿಸಲಾಗಿದೆ.) ಈ ಸಭೆಯಲ್ಲಿ ನಾವುಗಳು ಯಾವುದೇ ತಿರ್ಮಾನ ತೆಗೆದುಕೊಳ್ಳುವದಿಲ್ಲ, ಈ ಸಭೆಯಲ್ಲಿ ನಾವುಗಳು ಯಾವುದೇ ತಿರ್ಮಾನ ತೆಗೆದುಕೊಳ್ಳುವದಿಲ್ಲ, ಈ ಸಭೆಯ ಉದ್ದೇಶ ಸಾರ್ವಜನಿಕರ ಅಭಿಪ್ರಾಯ ಹಾಗೂ ಸಲ್ಲಿಸಿರುವ ಮೌಖಿಕ ಮತ್ತು ಲಿಖಿತ ಅಭಿಪ್ರಾಯಗಳನ್ನು ಸಂಗ್ರಹಿಸಿ, ಹಾಗೂ ತಾವುಗಳು ಸಲ್ಲಿಸಿರುವ ಮನವಿಗಳು, ಹೆಚ್ಚಿನ ಸಂಖ್ಯೆಯ ಲಿಖಿತ ಅಭಿಪ್ರಾಯಗಳು/ ಸಲಹೆಗಳು/ಆಕ್ಷೇಪಣೆಗಳನ್ನು ಸ್ವೀಕರಿಸಿದ್ದೇವೆ. ಅದನ್ನು ದಾಖಲಿಸಲಾಗುವುದು. ಈ ಸಭೆಯ ನಡವಳಿಯನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ದಾಖಲಿಸಿ, ಛಾಯಚಿತ್ರ (ಪ್ರತಿಯನ್ನು **ಅನುಬಂಧ-8** ರಲ್ಲಿ ಲಗತ್ತಿಸಲಾಗಿದೆ) ಹಾಗೂ ವಿಡೀಯೋ ದಾಖಲಾತಿಗಳೊಂದಿಗೆ (ಪ್ರತಿಯನ್ನು **ಅನುಬಂಧ-9** ರಲ್ಲಿ ಲಗತ್ತಿಸಲಾಗಿದೆ)ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು. ಇವರಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕೇಂದ್ರ ಕಛೇರಿ ಬೆಂಗಳೂರು ಇವರ ಮುಖಾಂತರ ಕಳುಹಿಸಿಕೊಡಲಾಗುವದು ಎಂದು ತಿಳಿಸಿದರು.

ಈ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡ ಎಲ್ಲಾ ಸಾರ್ವಜನಿಕರಿಗೆ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಿಗೆ ಧನ್ಯವಾದಗಳನ್ನು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

(ಕೆ.ರಾಜು)
**ಹಿರಿಯ ಪರಿಸರ ಅಧಿಕಾರಿ**
**ಕರಾಮಾನಿಮಂ.ಬಳ್ಳಾರಿ**

**ಶ್ರೀ ಚಂದ್ರಶೇಖರ ಗುಡಿ,**
**ಮುಖ್ಯ ಯೋಜನಾಧಿಕಾರಿಗಳು,**
**ಜಿಲ್ಲಾ ಪಂಚಾಯತ್, ಬಳ್ಳಾರಿ ಜಿಲ್ಲೆ**
**ಬಳ್ಳಾರಿ.**

## ಅನುಬಂಧ

1. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಅಧಿಕಾರಿಗಳ ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ.

2. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಸಾರ್ವಜನಿಕರ ವಿಳಾಸ ಮತ್ತು ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-2** ರಲ್ಲಿ ಲಗತ್ತಿಸಲಾಗಿದೆ.

3. ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ ರವರ ಅಧಿಕೃತ ಜ್ಞಾಪನ ಪತ್ರ ದಿನಾಂಕ: 13-11-2020 ರ ಅನ್ವಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬಳ್ಳಾರಿ ಇವರಿಗೆ ಅಧಿಕಾರ ಪತ್ರ ನೀಡಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಲು ಕ್ರಮವಹಿಸಲು ತಿಳಿಸಿರುವ ಪತ್ರವನ್ನು. **ಅನುಬಂಧ-3** ರಲ್ಲಿ ಲಗತ್ತಿಸಲಾಗಿದೆ.

4. ಜಿಲ್ಲಾಧಿಕಾರಿಗಳು ಬಳ್ಳಾರಿ ರವರ ಅಧಿಕೃತ ಜ್ಞಾಪನ ಪತ್ರ ದಿನಾಂಕ: 05-01-2021 ರ ಅನ್ವಯ ಶ್ರೀ ಚಂದ್ರಶೇಖರ ಗುಡಿ, ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ ಜಿಲ್ಲೆ, ಬಳ್ಳಾರಿ ಇವರಿಗೆ ಅಧಿಕಾರ ಪತ್ರ ನೀಡಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಲು ಕ್ರಮವಹಿಸಲು ತಿಳಿಸಿರುವ ಪತ್ರವನ್ನು. **ಅನುಬಂಧ-4** ರಲ್ಲಿ ಲಗತ್ತಿಸಲಾಗಿದೆ.

5. ಸಿ.ಎಸ್.ಆರ್.ಅಡಿಯಲ್ಲಿ ಉದ್ದಿಮೆಯವರು ದಿನಾಂಕ: 05-11-2020 ರಂದು ಜಿಲ್ಲಾಧಿಕಾರಿಯವರಿಗೆ ಸಲ್ಲಿಸಿರುವ ಪತ್ರದ ಪ್ರತಿ **ಅನುಬಂಧ-5** ರಲ್ಲಿ ಲಗತ್ತಿಸಿದೆ.

6. ಸಾರ್ವಜನಿಕರಿಂದ ಸ್ವೀಕೃತಿಯಾದ ಒಟ್ಟು **02 ಲಿಖಿತ ಹೇಳಿಕೆ/ ಆಕ್ಷೇಪಣೆಯನ್ನು ಅನುಬಂಧ-6** ರಲ್ಲಿ ಲಗತ್ತಿಸಲಾಗಿದೆ.

7. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪ್ರಚಾರಕ್ಕಾಗಿ ದಿನಾಂಕ 02-01-2021 ರಂದು ಕರಪತ್ರಗಳನ್ನು ವಿತರಿಸಲಾದ ಮತ್ತು ಧ್ವನಿವರ್ಧಕಗಳ ಮುಖೇನ ಯೋಜನಾ ಸ್ಥಳದ ಸುತ್ತಮುತ್ತಲ ಗ್ರಾಮಗಳಲ್ಲಿ ಸಾರ್ವಜನಿಕವಾಗಿ ಪ್ರಚಾರ ಮಾಡಲಾದ ಸಮಯದಲ್ಲಿ ತೆಗೆದುಕೊಂಡ ಛಾಯಾಚಿತ್ರಗಳ ಪ್ರತಿಯನ್ನು **ಅನುಬಂಧ-7** ರಲ್ಲಿ ಲಗತ್ತಿಸಲಾಗಿದೆ.

8. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪ್ರಕ್ರಿಯೆಯ ಛಾಯಾಚಿತ್ರಗಳ ಪ್ರತಿಯನ್ನು **ಅನುಬಂಧ-8** ರಲ್ಲಿ ಲಗತ್ತಿಸಲಾಗಿದೆ.

9. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಆಡಿಯೋ ಮತ್ತು ವಿಡಿಯೋ ಇರುವ ಸಿ.ಡಿ. ಗಳ ಪ್ರತಿಯನ್ನು **ಅನುಬಂಧ-9** ರಲ್ಲಿ ಲಗತ್ತಿಸಲಾಗಿದೆ.

(ಕೆ.ರಾಜು)
ಹಿರಿಯ ಪರಿಸರ ಅಧಿಕಾರಿ
ಕರಾಮಾನಿಮಂ.ಬಳ್ಳಾರಿ

ಶ್ರೀ ಚಂದ್ರಶೇಖರ ಗುಡಿ,
ಮುಖ್ಯ ಯೋಜನಾಧಿಕಾರಿಗಳು,
ಜಿಲ್ಲಾ ಪಂಚಾಯತ್, ಬಳ್ಳಾರಿ ಜಿಲ್ಲೆ
ಬಳ್ಳಾರಿ.